# ರೈಲ್ವೆ: ಕನ್ನಡ ವಿರೋಧಿ ಧೋರಣೆ

ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳು ನಮ್ಮ ರಾಷ್ಟ್ರಭಾಷೆಗಳಾದದ್ದು ಯಾವಾಗ? ರೈಲ್ವೆ ಇಲಾಖೆ ನಸುಗುನ್ನಿಯಂತೆ ವರ್ತಿಸಿ ಹಿಂದಿ ಭಾಷೆಯನ್ನು ಇಡೀ ದೇಶದ ಮೇಲೆ ಹೇರಲು ಹೊರಟಿದೆಯೆ?

ಒಕ್ಕೂಟ ವ್ಯವಸ್ಥೆಯಲ್ಲಿ ದೇಶದ ಎಲ್ಲ ಭಾಷೆಗಳೂ ರಾಷ್ಟ್ರಭಾಷೆಗಳೇ. ಭಾಷಾವಾರು ಪ್ರಾಂತ್ಯಗಳ ಮಹತ್ವವನ್ನು ಅರಿತು ಇಡೀ ದೇಶದ ಬಹುತ್ವವನ್ನು ಪ್ರತಿನಿಧಿಸುವಂತೆ ಭಾಷೆಗಳ ಆಧಾರದಲ್ಲೇ ರಾಜ್ಯಗಳನ್ನು ವಿಂಗಡಿಸಲಾಗಿದೆ. ಹೀಗಾಗಿ ಪ್ರತಿಯೊಂದು ರಾಜ್ಯಗಳ ಭಾಷೆಗೂ ಅದರದ್ದೇ ಆದ ಮಹತ್ವವಿದೆ. ಆದರೆ ನಮ್ಮ ರೈಲ್ವೆ ಇಲಾಖೆಗೆ ಈ ಸತ್ಯ ಗೊತ್ತಿಲ್ಲವೆ? ಅಥವಾ ಗೊತ್ತಿದ್ದೂ ಅಜ್ಞಾನವನ್ನು ನಟಿಸುತ್ತಿದೆಯೆ? ರೈಲ್ವೆ ಇಲಾಖೆಯ 26502 ಹುದ್ದೆಗಳ ಭರ್ತಿಗೆ ಇತ್ತೀಚೆಗೆ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಲಾಗಿದೆ. ‘ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಲಗತ್ತಿಸುವ ಎಲ್ಲ ದಾಖಲೆಗಳೂ ಈ ಎರಡರಲ್ಲಿ ಯಾವುದಾದರೂ ಒಂದು ಭಾಷೆಯಲ್ಲಿರಬೇಕು. ಇತರ ಭಾಷೆಗಳಲ್ಲಿ ಭರ್ತಿ ಮಾಡಲಾದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ’ ಎಂದು ರೈಲ್ವೆ ಇಲಾಖೆ ತಿಳಿಸಿದೆ. ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳು ನಮ್ಮ ರಾಷ್ಟ್ರಭಾಷೆಗಳಾದದ್ದು ಯಾವಾಗ? ರೈಲ್ವೆ ಇಲಾಖೆ ನಸುಗುನ್ನಿಯಂತೆ ವರ್ತಿಸಿ ಹಿಂದಿ ಭಾಷೆಯನ್ನು ಇಡೀ ದೇಶದ ಮೇಲೆ ಹೇರಲು ಹೊರಟಿದೆಯೆ? ದಕ್ಷಿಣದ ರಾಜ್ಯಗಳಲ್ಲಿ ಹಿಂದಿ ಭಾಷೆಯನ್ನು ಬಲ್ಲವರು ತುಂಬಾ ಕಡಿಮೆ ಎನ್ನುವುದು ಇಲಾಖೆಗೆ ಗೊತ್ತಿಲ್ಲವೆ? ಕನ್ನಡವೂ ಸೇರಿ 21 ಭಾಷೆಗಳಿಗೆ ದೇಶದ ಸಂವಿಧಾನವೇ ಅಧಿಕೃತ ಮಾನ್ಯತೆ ನೀಡಿರುವುದನ್ನು ನಿರ್ಲಕ್ಷ್ಯಿಸುವ ರೈಲ್ವೆಯ ಈ ಕ್ರಮ ಅದರ ಸರ್ವಾಧಿಕಾರಿ ಧೋರಣೆಯನ್ನೇ ಪ್ರಕಟಿಸಿದೆ. ಇಡೀ ದೇಶದ ಮೇಲೆ ಏಕಭಾಷೆಯನ್ನು ಹೇರುವ ಹುನ್ನಾರ ಇದರ ಹಿಂದೆ ಅಡಗಿದೆ.

ಈ ಹಿಂದೆ ಮಮತಾ ಬ್ಯಾನರ್ಜಿ ಅವರು ದೇಶದ ರೈಲ್ವೆ ಮಂತ್ರಿಗಳಾಗಿದ್ದಾಗ ರೈಲ್ವೆ ಹುದ್ದೆಗಳ ಭರ್ತಿಗೆ ಆಯಾ ರಾಜ್ಯ ಭಾಷೆಗಳಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಿಸಿದ್ದರು. ಹಿಂದಿ ಗೊತ್ತಿಲ್ಲದ ಲಕ್ಷಾಂತರ ಯುವಜನರಿಗೆ ಇದರಿಂದ ಅನುಕೂಲವಾಗಿತ್ತು. ಈಗ ನೋಡಿದರೆ ಕೇಂದ್ರ ಸರಕಾರ ಹಿಂಬಾಗಿಲಿನಿಂದ ಹಿಂದಿಯನ್ನು ಎಲ್ಲರ ತಲೆಯ ಮೇರುವ ಯತ್ನಕ್ಕೆ ರೈಲ್ವೆ ಇಲಾಖೆಯನ್ನು ಬಳಸಿಕೊಳ್ಳುತ್ತಿದೆ. 26 ಸಾವಿರಕ್ಕೂ ಹೆಚ್ಚು ಹುದ್ದೆಗಳಲ್ಲಿ ಬೆಂಗಳೂರಿನ ನೇಮಕಾತಿ ಮಂಡಳಿಯು ಏನಿಲ್ಲವೆಂದರೂ ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ರಾಜ್ಯದಲ್ಲೇ ನೇಮಕ ಮಾಡಿಕೊಳ್ಳುತ್ತದೆ. ‘ಈ ಹುದ್ದೆಗಳೂ ಕನ್ನಡಿಗರಿಗೆ ದಕ್ಕಬಾರದು, ಅಲ್ಲೂ ಉತ್ತರ ಭಾರತದವರನ್ನೇ ತುಂಬಿಸಿಕೊಳ್ಳಬೇಕು’ ಎನ್ನುವುದು ಸರ್ಕಾರದ ಉದ್ದೇಶ ಇದ್ದಂತಿದೆ. ಅರ್ಜಿಯಲ್ಲಿ ಸಹಿ ಕೂಡಾ ಕನ್ನಡದಲ್ಲಿ ಇರುವಂತಿಲ್ಲ ಎಂದರೆ ಏನರ್ಥ? ಇದು ಕನ್ನಡಿಗರನ್ನು ಮತ್ತು ಇತರ ಭಾಷಿಕರನ್ನು ಕೇಂದ್ರ ಸರಕಾರದ ಉದ್ಯೋಗಗಳಿಂದ ವಂಚಿಸುವ ಸಂಚು ಎನ್ನದೆ ನಿರ್ವಾಹವಿಲ್ಲ.

ಉದ್ಯೋಗ ಸಿಗುವುದೇ ದುಸ್ತರವಾಗಿರುವ ಈ ದಿನಗಳಲ್ಲಿ, ಒಂದೆಡೆ ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವ ಕೇಂದ್ರ ಸರ್ಕಾರದ ಘೋಷಣೆ ಪೊಳ್ಳಾಗಿದೆ. ಇನ್ನೊಂದೆಡೆ ಇರುವ ಉದ್ಯೋಗಗಳಲ್ಲೂ ಕನ್ನಡಿಗರಿಗೆ ವಂಚನೆ ಮಾಡುವ ಪಿತೂರಿ ನಡೆದಿದೆ. ಒಂದು ಹುದ್ದೆಗೆ ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಗಳು ನೂರೆಂಟು ಪೂರಕ ದಾಖಲೆಗಳು ಮತ್ತು ಪ್ರಮಾಣಪತ್ರಗಳನ್ನು ಸಲ್ಲಿಸಬೇಕಾಗುತ್ತದೆ. ಕನ್ನಡದಲ್ಲಿ ಇರುವ ಪ್ರಮಾಣಪತ್ರಗಳನ್ನು ದೃಢೀಕರಿಸಲು ಸರ್ಕಾರಿ ಕಚೇರಿಗಳ ಕಂಭ ಸುತ್ತಬೇಕಾಗುತ್ತದೆ. ಜಾತಿ ದೃಢೀಕರಣ, ಆದಾಯ, ಅಂಗವೈಕಲ್ಯ, ಗ್ರಾಮೀಣ ಕೃಪಾಂಕ ಮುಂತಾಗಿ ಹತ್ತಾರು ಅರ್ಹತೆಗಳಿಗೆ ಸಂಬಂಧಿಸಿ ದಾಖಲೆಗಳನ್ನು ಹಿಂದಿ ಮತ್ತು ಇಂಗ್ಲಿಷ್‌ನಲ್ಲೇ ಸಲ್ಲಿಸಲು ಅಭ್ಯರ್ಥಿಗಳು ಓಡಾಡುವುದು ಅವರ ಶ್ರಮವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಹೀಗೆ ಗೊತ್ತಿಲ್ಲದ ಭಾಷೆಯಲ್ಲಿ ಅರ್ಜಿಗಳನ್ನು ತುಂಬುವಾಗ ತಪ್ಪಾಗುವ ಸಂಭವವೂ ಹೆಚ್ಚು. ಕೇಂದ್ರ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಮತ್ತು ರಕ್ಷಣಾ ಇಲಾಖೆಯಲ್ಲೂ ಹೀಗೆ ಹಿಂದಿಯನ್ನು ದಕ್ಷಿಣದವರ ಮೇಲೆ ಹೇರುವ ಯತ್ನಗಳು ನಿರಂತರವಾಗಿ ನಡೆದಿವೆ.

ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಉದ್ಯೋಗಗಳನ್ನು ಭರ್ತಿ ಮಾಡಿಕೊಳ್ಳುವಾಗ ಆಯಾ ರಾಜ್ಯಗಳ ಅಭ್ಯರ್ಥಿಗಳಿಗೆ ಅವರದ್ದೇ ಭಾಷೆಯಲ್ಲಿ ಪ್ರತ್ಯೇಕ ಫಾರಂಗಳನ್ನು ತುಂಬುವ ಅವಕಾಶ ಸಿಗುವಂತೆ ಮಾಡುವುದು ಸಂವಿಧಾನದ ಒಕ್ಕೂಟ ವ್ಯವಸ್ಥೆಯ ಆಶಯಗಳಿಗೆ ಪೂರಕವಾಗಿಯೇ ಇದೆ. ರಾಜ್ಯದ ಸಂಸದರು ಈ ನಿಟ್ಟಿನಲ್ಲಿ ಪಕ್ಷಭೇಧ ಮರೆತು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಇಂಗ್ಲಿಷ್ ಮತ್ತು ಹಿಂದಿಯ ದಾಳಿಯಿಂದ ಈಗಾಗಲೆ ಕನ್ನಡ ಬಡವಾಗಿದೆ. ‘ಕನ್ನಡ ಅನ್ನದ ಭಾಷೆಯಾಗಬೇಕು’ ಎಂದು ಪದೇ ಪದೇ ಭಾಷಣ ಹೊಡೆಯುವ ನಮ್ಮ ಸಾಹಿತಿಗಳು ಮತ್ತು ಬುದ್ಧಿಜೀವಿಗಳು ಇತ್ತ ಗಮನ ಹರಿಸಬೇಕು. ರೈಲ್ವೆಯು ತನ್ನ ಏಕಪಕ್ಷೀಯ, ಸಂಕುಚಿತ ಧೋರಣೆಯಿಂದ ಹಿಂದೆ ಸರಿಯುವಂತೆ ಮಾಡಬೇಕು.

■ ಬಿ.ಎಂ. ಹನೀಫ್

